ಅಧ್ಯಕ್ಷರು : ಈ ಪ್ರಶ್ನೆಗೆ ಎರಡು ವಾರಬೇಕೇ ಸಚಿವರೆ. ಒಂದು ವಾರದಲ್ಲಿ ಕೊಡಲು ಸಾಧ್ಯವಾಗುತ್ತದೆಯೇ ?

ಶ್ರೀ ಕೆ.ಹೆಚ್. ಪಾಟೀಲ್ : ಮುಂದಿನ ವಾರ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಮುಂದಿನ ವಾರ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : ಪ್ರಶ್ನೆಯ ಸಂಖ್ಯೆ : 2575ಕ್ಕೆ ಎರಡು ವಾರ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಸವರಾಜ ಪಾಟೀಲ ಅಟ್ಟೂರ್ : ಅಧ್ಯಕ್ಷರೆ ಇದು ಬಹಳ ಮಹತ್ವವಾದ ವಿಚಾರ.

ಅಧ್ಯಕ್ಷರು : ಜಿಲ್ಲಾ ಪರಿಷತ್ ಕಛೇರಿ ಮುಚ್ಚಿರುವುದು ಅಲ್ಲವೆ?

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಕಛೇರಿಯನ್ನು ಲಾಕ್ ಮಾಡಿದ್ದಾರೆ, ಏಕೆ ಮಾಡಿದ್ದಾರೆ, ಸರಿಯಾದ ರೀತಿಯಲ್ಲಿ ಉತ್ತರವನ್ನು ಆದಷ್ಟು ಬೇಗ ತರಿಸಬೇಕು.

ಅಧ್ಯಕ್ಷರು : ಆದಷ್ಟು ಬೇಗ ತರಿಸುತ್ತೇನೆ.

ಕೋಲಾರ ತಾಲ್ಲೂಕಿನಲ್ಲಿ ಲೋಕಪಯೋಗಿ ಇಲಾಖೆಯ ಕಟ್ಟಡಗಳು

2580 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಲೋಕಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ಹತೋಟಿ ಮತ್ತು ಸಂರಕ್ಷಣೆಗಳ ವ್ಯಾಪ್ತಿಗೆ ಬರುವ ಕಟ್ಟಡಗಳ ಹೆಸರುಗಳನ್ನು ಅವುಗಳ ಕಟ್ಟಡಗಳುಳ್ಳ ಅಳತೆಯೊಂದಿಗೆ ನೀಡುವುದು.

ಆ) 1987-88, 88-89, 89-90, 90-91 ಸಾಲುಗಳಲ್ಲಿನ ಮತ್ತು 1-4-91ರಿಂದ 20-8-91ರವರೆಗಿನ ಅವಧಿಯಲ್ಲಿ ಈ ಎಲ್ಲ ಕಟ್ಟಡಗಳ ವಾರ್ಷಿಕ ಆದಾಯ, ಖರ್ಚು ಮಾಡಿದ ಹಣ ಮತ್ತು ವಾರ್ಷಿಕ ದುರಸ್ಥಿಗಳ ವಿವರಗಳು.

ಇ) ಸುಸ್ಥಿಯಲ್ಲಿರುವ ಕಟ್ಟಡಗಳ ವಿವರಗಳು.

ಈ) ಈ ಕಟ್ಟಡಗಳ ದುರಸ್ತಿಗಾಗಿ ಬೇಕಾಗುವ ಹಣವೆಷ್ಟು?

ಉ) ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅವರ ಕೊಠಡಿಯು ಸೇರಿದಂತೆ ಸೋರುತ್ತಿರುವುದು ನಿಜವೆ?

ಊ) ಸೂಪರಿಂಟೆಂಡ್ ಆಫ್ ಪೋಲೀಸ್‌ರವರ ಕೊಠಡಿಯಲ್ಲಿನ ಮೇಲ್ವಾಚಾರಣೆಯ ಪ್ಲಾಸ್ಟರ್ ಬಿದ್ದಿರುವುದು ನಿಜವೆ ಹಾಗಿದ್ದಲ್ಲಿ ಈ ಕಟ್ಟಡಗಳ ದುರಸ್ತಿಗಾಗಿ ಕೈಗೊಂಡ ಕ್ರಮವೇನು?

ಋ) ಸರ್ಕಾರವು ಈ ಎಲ್ಲ ಕಟ್ಟಡಗಳ ದುರಸ್ತಿಗಾಗಿ ಬೇಕಾಗುವ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

ಆ) ಸಾಲುಗಳು	ವಾರ್ಷಿಕ ಆದಾಯ	ಅಲಾಟಮೆಂಟ್	ದುರಸ್ತಿಗಾಗಿ ಖರ್ಚು ಮಾಡಿದ ಮೊತ್ತ
1987-88	2.40 ಲಕ್ಷ ರೂ.ಗಳು	ಇಲ್ಲ	ಇಲ್ಲ
88-89	2.00 "	4.446 "	4.350
89-90	2.00 "	4.446 "	-
90-91	2.00 "	4.446 "	2.350 "
1-4-91ರಿಂದ 20-8-91	0.65 "	5.87 "	0.523 "

ಇ)ಈ ಕೆಳಕಂಡ ಕಟ್ಟಡಗಳು ಸುಸ್ಥಿತಿಯಲ್ಲಿರುವುವು.

1) ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕೋಲಾರ.

2) ತಾಲ್ಲೂಕು ಖಜಾನೆ ಕಛೇರಿ, ಕೋಲಾರ.

3) ತಾಲ್ಲೂಕು ಆಫೀಸ್ ಕಟ್ಟಡ, ಕೋಲಾರ.

4) ಕೆ.ಎನ್. ಶಾನಿಟೋರಿಯಂ ವಸತಿ ಗೃಹ ಕೋಲಾರ.

5) ಪೋಲೀಸ್ ವಸತಿ ಗೃಹಗಳು, ನರಸಾಪುರ.

6) ಪೋಲೀಸ್ ಠಾಣೆ ನರಸಾಪುರ.

7) ಪೋಲೀಸ್ ವಸತಿ ಗೃಹಗಳು ವೇಮಗಲ್ (4 ಬ್ಲಾಕ್‌ಗಳು)

8) ಡಿ.ಎ.ಆರ್. ಬಾರ್‌ಲೈನ್ಸ್, ಕೋಲಾರ.

9) ಎಸ್.ಎನ್.ಆರ್. ಆಸ್ಪತ್ರೆ ನೌಕರರ ವಸತಿ ಗೃಹ, ಕೋಲಾರ.

ಈ) 20 ಲಕ್ಷ ರೂ.ಗಳು ಬೇಕಾಗುವುದು.

ಉ) ಹೌದು. ಕೆಲವು ಭಾಗಗಳು ಮಾತ್ರ.

ಊ) ಇತ್ತೀಚಿನ ಮಳೆಯಿಂದಾಗಿ ಅವರ ಕೊಠಡಿಯ 2 2 ಉದ್ದಳತೆಯ ಪ್ಲಾಸ್ಟರ್ ಬಿದ್ದಿರುವುದು ನಿಜ. ಈ ಬಗ್ಗೆ ರಿಪೇರಿಯ ಕ್ರಮ ಕೈಗೊಳ್ಳಲಾಗಿದೆ.

ಋ) ಕಟ್ಟಡಗಳ ದುರಸ್ತಿ ಲೆಕ್ಕ ಶೀರ್ಷಿಕೆಯಲ್ಲಿ ಹಣ ಬಿಡುಗಡೆ ಮಾಡಿದೆ. ಆದರೆ ಸಾಕಷ್ಟು ಹಣವನ್ನು ನೀಡಿರುವುದಿಲ್ಲ.

Name of the Building	*Plinth Area in Sq.ft*
NON. RESIDENTIAL	
General Administration.	
1. Deputy Commissioner Office, Kolar	12788
2. District Treasury Extension, Kolar	7000
3. Extension of Record room of district Treasury at Kolar	5237
4. D.C. Home Office at Kolar	1250
5. Assistant Commisioner Office at Kolar	1762
6. (i) Taluk Office building at Kolar	7547
(ii) Construction of Barrages	320
7. District Board Office at Kolar	5250
8. District Office Canteen at Kolar	2778
	43932
JUDICIAL	
1. Magistrate Court Building at Kolar	15025
2. (a) District and Session Court building at Kolar	15700
3. Accused Witness Shed at Kolar	744
	31469
JAIL	
1. District Lock-up at Kolar	6166
POLICE	
1. District Superintendent of Police building at Kolar	5516
2. Canteen building in D.A.R. line at Kolar	1300
3. Garrage, Wireless Station Store recorded and Dy.S.P Office	2235
4. Centry room and Improvements to S.P's Office	87
5. Kasaba Police Station	3708
6. Town Police Station	2150
7. Garrage in S.P.'s Office	620
8. do Marp Office (MARP)	620

9. MARP Office	140
10. Armourd Workshop abd Bell of Arm at Kolar	2400
11. Additional Store and Circle Inspector's Office at Kolar	580
12. Police Station at Narasapur	540
13. Police Station at Vemgal	775
	20671

EDUCATION

1. Government College old	19325
2. Constn. of Lecture Theatre at Library building at Govt. College	13677
3. do New Building	36935
4 Additional Class Room	5200
5. Govt. High School at Kolar(Junior College)	30117
6. Govt. College Hostel	14480
	119734

MEDICAL

1. S.N.R. Hospital	32920
2. S.N.R. Hospital 1st Floor	32920
3. Maternity Ward	768
4. District Health Laboratory	3120
5. K.N. Sanitorium at Kolar	54734
6. Childrens Ward K.N. Sanitorium	2175
7. Administrative Block at Kolar	32435
8. Frequency Conversion Building	384
9. Maternity Hospital	1512
10. Additional Ward at K.N. Sanitorium	2121
a) Construction of 2 Wards of 20 beds ward at K.N.Sanitorium	10034
b) Five Beds Sterlisation Ward F.P.M. S.N.R. Hospital	4838
11. Family Planning Operation Centre	1183
12. T.B. Centre S.N.R. Hospital at Kolar	7450

13. 30 bedded sterlisation attached to District Hospital	10170
14. A.N.M. School-cum-Hostel, Kolar	4955
	174299

CIVIL WORKS

1. Executive Engineer's Office at Kolar	9393
2. do Extension	4910
3. M.I.Sub-Division Office at Kolar	1754
4. Ass. Executive Engineer's office at Kolar	1274
	17331

T.B.'s

1. Traveller Bungalow at Kolar	7108
2. do New Block at Kolar	4408
	11516

RESIDENTIAL

General Administration.

1. Deputy Commissioner Bungalow at Kolar	9183
2. Assistant Commissioner Quarters	1050
3. Revenue Inspector Quarters at Vemgal	661
	10894

JUDICIAL

1. District and Session Judges Quarters	2500

JAIL

1. Staff Quarters at Dist. Sub-Jail	

POLICE

1. S.P. Quarters	2281
2. Sub-Quarters	813
a) do Special Branch	2750
3. Marp BAR lines	2626
4. Old A.S.I.'s quartgers	2626
5. Police Constable quarters	1518
6. -do-	792
7. -do-	660
8. -do-	660

9. 8 Daffedars and 36 P.Cs quarters	13208
10. Canteen Building MARP Bar lines	1300
11. Police Lines, Narasapur	1925
12. 2 H.C.s and 9 P.Cs quarters, Vemgal	5797
13. S.I. Quarters, Vemgal	831
14. 1 H.C. and 8 P.Cs quarters at vemgal	4477
15. Police Lines Sugatur	2150
	43814

EDUCATION

1. Govt. High School Head Master Quarters	4038
2. Single Block Quarters for Education Department in PWD Colony at Kolar	1354
	5392

MEDICAL

1. District Surgeon Quarters at Kolar	2439
2. L.M.O. Quarters	3760
3. R.M.O. quarters	1050
4. Assistant Surgeon Quarters	1050
5. -do-	1050
6. Nurse Quarters at S.N.R. Hospital (Old)	1335
7. -do- Single (Old)	1335
8. Nurse Quarters S.N.R. Hospital (new)	2310
9. Head Clerk Quarters	770
10. District Clerk Quarters	600
11. Superintendent Quarters K.N.S.	2132
12. R.M.O's quarters	1837
13. Two quarters for doctors	2050
14. Nurse Quarters in Doctors	3600
15. Ten Servants quarters (twin)	770
17. Nurse Superintendent quarters	1200
18. Nurse quarters new -do-	1200
19. Compound and X-ray Technicians	1150

20. X-ray Attender quarters	345
a) Lady Health Visitor Quarters, Vemgal	600
	33831

CIVIL WORKS

1. Executive Engineer Bungalow	3877
2. Assistant Engineer quarters	1050
3. J.E's quarters Block No.1	1300
4. -do- Block 2 (pay scale 210-300)	1300
5. J.Es quarters Block No.3	1300
6. do Block No.4	1300
7. do block No.5	1300
8. Supervisors quarters Block 1 (pay scale 100-150)	1300
9. -do- Block No. 2	1100
10. -do- Block No. 3	1100
11. -do- Block No. 4	1100
12. -do- Block No.5	1100
13. -do- Block No.6	1100
14. -do- Block No.7	1100
15. -do- Block No.8	1100
16. -do- Block No.9	1100
17. -do- Block No. 10	1100
18. -do- Block No. 11	1100
19. -do- Block No. 12	1100
20. Clerks quarters Block No. 12 (Rs. 40-100)	1800
21. -do- Block No.2	1800
22. -do- Block. 2 (Rs. 100-150)	1800
23. -do- Block No.3	1800
24. -do- Block No.4	1800
25. -do- Block No.5	1800
26. -do- Block No.6	1800
27. -do- Block No.7	1800
28. -do- Block No.8	1800

29. Clerks Quarters Single Quarters Block-1	580
30. -do- Block.2	580
31. Class IV Official Quarters (Pay Scale 25-40) twin Block No.1	1000
32. -do- Twin Block No.2	1000
33. -do- No.3	1000
34. -do- No.4	1000
35. -do- No.5	1000
36. Supervisors quarters Block No.14	1100
37. Supervisors quarters , Sugatur	831
38. Supervisor quarters, Vokkaleri	831
39. Medical Officers quarters, Sugatur	1050
40. Compunders and Midwife quarters at Sugatur	600
41. H.I. and H.V. Quarters in Sugatur	3080
42. School Health Assistant Quarter at Sugatur	600
43. Block Extension Educator Quarter in Sugatur	400
44. Auxillary Nurse and Mid wife quarters at Sugatur	800
45. L.M.O Quarters in Sugatur	800
	57079

Grand Total of Buildings
Plinth area is 5,78,628 Sq, ft.

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಂದು ತಿದ್ದುಪಡಿಯಾಗಬೇಕಾಗಿದೆ. ಕನ್ನಡದಲ್ಲಿ ಸುಸ್ಥಿತಿ ಎಂದು ಇದೆ, ಇಂಗ್ಲೀಷ್ನಲ್ಲಿ ಬ್ಯಾಡ್ ಕಂಡೀಷನ್ ಎಂದು ಇದೆ.'ದು' ಎಂದು ಇರಬೇಕಾಗಿದ್ದು 'ಸು' ಎಂದು ಆಗಿದೆ.

ಅಧ್ಯಕ್ಷರು : ಅದು ಬೆರಳಚ್ಚಿನಲ್ಲಿ ತಪ್ಪಾಗಿದೆ.

ಶ್ರೀ ಸಿ. ಬೈರೇಗೌಡ : ಇದನ್ನು ತಿದ್ದುಪಡಿಮಾಡಿಕೊಳ್ಳಬೇಕೆಂದು ವಿನಂತಿಸುತ್ತೇನೆ. ಸ್ವಾಮಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಬಹಳ ಮುಖ್ಯವಾದ ಕಛೇರಿ. ಆದೇ ರೀತಿ ಪೋಲೀಸ್ ಅಧಿಕಾರಿಗಳ (ಎಸ್.ಪಿ) ಯವರ ಕಛೇರಿಯು ಮುಖ್ಯವಾದುದು ಮತ್ತೆ ಜಿಲ್ಲೆಯ ಖಜಾನೆಯ ಕಛೇರಿಯು ಮುಖ್ಯವಾದುದು. ಇಲ್ಲಿ ಹಣವನ್ನು ಮುಖ್ಯಮುಖ್ಯವಾದ ಕಾಗದಪತ್ರಗಳನ್ನ ಇಟ್ಟಿರತಕ್ಕ ಜಾಗ, ಆಮೇಲೆ ಆಸ್ಪತ್ರೆ ಇವೆಲ್ಲಾ ಕಟ್ಟಡಗಳು ರಿಪೇರಿಯಾಗಬೇಕಾಗಿದೆ. ನಾನು ಅಲ್ಲಿಗೆ ಹೋಗಿ ಕಣ್ಣಾರೆ ನೋಡಿ ಬಂದುದರಿಂದ ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ಮತ್ತು ತಮ್ಮ ಗಮನಕ್ಕೆ ತರಬೇಕಾಗಿದೆ. ಎಸ್.ಪಿ. ಯವರ ತರೆಯಮೇಲೆ ಗಿಲಾವು ಮಾಡಿರುವ ಪ್ಲಾಸ್ಟರ್ ಬಿದ್ದಿದೆ. ಅದೃಷ್ಟವಶಾತ್ ಅವರಿಗೆ ಏನೂ ಆಗಲಿಲ್ಲ. ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ಇದೆ

ಈ ಕಟ್ಟಡ. ಪೋಲೀಸ್ ಕ್ವಾರ್ಟರ್ಸ್, ಪೋಲೀಸ್ ಸ್ಟೇಷನ್ ಕಟ್ಟಡಗಳು ಈ ರೀತಿ ಇದೆ. ಇವುಗಳನ್ನ ಕನಿಷ್ಟಪಕ್ಷ 3 ಇಲ್ಲವೇ 6 ತಿಂಗಳೊಳಗಾದರೂ ಕೂಡ ದುರಿಸ್ಥಿ ಪಡಿಸಬೇಕು. ಇದಕ್ಕೆ 20 ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಹೇಳುತ್ತಿದ್ದಾರೆ. ಈ 20 ಲಕ್ಷ ಹಣವನ್ನು ಬಿಡುಗಡೆ ಮಾಡಿ ಈ ಅತೀ ಮುಖ್ಯವಾಗಿರತಕ್ಕ ಕಟ್ಟಡಗಳಾದ ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ, ಎಸ್.ಪಿ.ಯವರ ಕಛೇರಿ ಆಸ್ಪತ್ರೆಯ ಕಟ್ಟಡಗಳನ್ನು 3 ಇಲ್ಲವೇ 6 ತಿಂಗಳೊಳಗಾಗಿ ದುರಸ್ಥಿ ಮಾಡಿಸಿ. ಈಗಾಗಲೇ ನಾವು ಸೆಪ್ಟಂಬರ್ನಲ್ಲಿ ಇದ್ದೇವೆ ಇನ್ನು ಉಳಿದಿರುವ ಸಮಯದಲ್ಲಾದರೂ ಅವುಗಳನ್ನು ದುರಸ್ಥಿ ಮಾಡಿಸಬೇಕು. ದಯಮಾಡಿ ತಾವು ಅದಕ್ಕೆ ಪಾಸೀಟೀವ್ ಆಶ್ವಾಸನೆಯನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ : ಅಧ್ಯಕ್ಷರೆ, ಇದರ ರಿಪೇರಿಗಾಗಿ ಸುಮಾರು ೨೦ ಲಕ್ಷ ರೂಪಾಯಿಗಳು ಬೇಕಾಗಿರುತ್ತದೆ. ನಾವು ಪ್ರಸ್ತಾಪದಲ್ಲಿ ಅನುದಾನವನ್ನು ಜಾಸ್ತಿಕೊಡಬೇಕೆಂದು ಕೇಳಿದ್ದೇವೆ ಅದು ಬಂದರೆ ಇದನ್ನು 3 ಇಲ್ಲವೆ 6 ತಿಂಗಳೊಳಗಾಗಿ ಮಾಡಿಸುತ್ತೇವೆ. ಈಗ 5 ಲಕ್ಷ ರೂ. ಬಿಡುಗಡೆಯಾಗಿದೆ, ಇದರಲ್ಲಿ ಜರೂರಾದ ಕೆಲಸ ಯಾವುದಿದೆ ಅದನ್ನು ಮಾಡಿ ಉಳಿದಿರುವುದನ್ನು ಪರಿಶೀಲನೆ ಮಾಡಿ 6 ತಿಂಗಳೊಳಗೆ ಇಲ್ಲವೆ 1 ವರ್ಷದೊಳಗೆ ಅನುದಾನವು ಬಂದಕೂಡಲೆ ಮಾಡಿ ಮುಗಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ನಾನು ಒಂದುದಿನ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿದ್ದಾಗ ಸೋರುತ್ತಿದುದನ್ನು ಕಣ್ಣಾರೆ ನೋಡಿದೆ, ಇದು ನಮಗೆ ನಾಚಿಕೆಯಾಗುತ್ತದೆ.

ಅಧ್ಯಕ್ಷರು : ನೀವು ಛತ್ರಿಯನ್ನು ತೆಗೆದುಕೊಂಡು ಹೋಗಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ : ಸರಿಯಾಗಿ ಹೇಳಿದಿರಿ, ತಮಗೆ ಧನ್ಯವಾದಗಳು. ಅಧ್ಯಕ್ಷರೆ, ಆ ಕಟ್ಟಡವನ್ನು ಕಟ್ಟಿ ಸುಮಾರು 100 ವರ್ಷಗಳಾಗಿರಬೇಕು.

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರು ಹೇಳುತ್ತಾರೆ ಹೆಲ್ಮೆಟ್ಟನ್ನು ತೆಗೆದುಕೊಂಡು ಹೋಗಿ ಎಂದು.

ಶ್ರೀ ಸಿ. ಬೈರೇಗೌಡ : ಹೌದು ನಮ್ಮ ಜಿಲ್ಲೆಯ ಎಸ್.ಪಿ. ಯವರು ಹೆಲ್ಮೆಟ್ ಹಾಕಿಕೊಂಡು ಇರಬೇಕಾಗಿತ್ತು. ಹೆಲ್ಮೆಟ್ಗಳನ್ನು ತೆಗೆದುಕೊಂಡು ಹೋಗಿ ಕುಳಿತುಕೊಳ್ಳತಕ್ಕ ಕಟ್ಟಡಗಳು, ಛತ್ರಿಯನ್ನು ತೆಗೆದುಕೊಂಡು ಹೋಗಿ ಕುಳಿತುಕೊಳ್ಳತಕ್ಕ ಕಟ್ಟಡಗಳು ನಮ್ಮಲ್ಲಿ ಇವೆ. ಇದನ್ನು ತಾವು ಗಮನಿಸಿ. ನಮಗೆ ಹಣ ಬಂದರೆ ಮಾಡುತ್ತೇವೆ ಎಂದು ಅಲ್ಲ, ಸರ್ಕಾರದವರು ಖರ್ಚುಮಾಡತಕ್ಕವರು,ಆದುದರಿಂದ ಈ ರೀತಿ ಅತ್ಯಂತ ದುಸ್ಥಿತಿಯಲ್ಲಿರತಕ್ಕ ಜಿಲ್ಲಾಧಿಕಾರಿಗಳ ಕಛೇರಿ, ಎಸ್.ಪಿ.ಯವರ ಕಛೇರಿ, ಜಿಲ್ಲೆಯ ಖಜಾನೆ, ತಾಲ್ಲೂಕು ಕಛೇರಿ, ಆಸ್ಪತ್ರೆ ಇಂತಹ ಮುಖ್ಯವಾದ ಕಟ್ಟಡಗಳನ್ನು ಈ ವರ್ಷದಲ್ಲಿಯೇ ದುರಿಸ್ಥಿಪಡಿಸಿ. ಈಗ 5 ಲಕ್ಷ ಚಿಲ್ಲರೆ ಹಣವನ್ನು ಕೊಟ್ಟಿದ್ದೀರಿ, ಬೇಕಾಗಿರತಕ್ಕದ್ದು 20 ಲಕ್ಷ ರೂಪಾಯಿ ಹಣ ಇನ್ನು 15 ಲಕ್ಷ ರೂಪಾಯಿಯನ್ನು ಕೂಡ ಈ ಸಾರಿಯೇ ಕೊಟ್ಟು ದುರಸ್ಥಿಗೊಳಿಸಬೇಕು. ಕಟ್ಟಡ ಬಿದ್ದುಹೋಗಿ ಅಲ್ಲಿರತಕ್ಕ ಅಧಿಕಾರಿಗಳ ಪ್ರಾಣಾಪಾಯವಾಗುವ ಪರಿಸ್ಥಿತಿ ಬಂದರೆ ಯಾರು ಜವಾಬ್ದಾರಿಯಾಗುತ್ತಾರೆ. ಇದು ಅಧಿಕಾರಿಗಳ ರಕ್ಷಣೆಗೋಸ್ಕರ. ನಾಳೆ ಜಿಲ್ಲಾಧಿಕಾರಿಗಳ ಕಛೇರಿ ಬಿದ್ದುಹೋದರೆ ಇಡೀ ದೇಶದಲ್ಲಿ ನಗೆಪಾಟಲು ಆಗುತ್ತದೆ. ಆ ನಗೆಪಾಟಲು ನಮ್ಮ ರಾಜ್ಯಕ್ಕೆ ಬರಬಾರದು. ಈ ದೃಷ್ಟಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ತಾವು ಕೊಟ್ಟಿರತಕ್ಕ

5 ಲಕ್ಷದ ಜೊತೆಗೆ ಇನ್ನು 15 ಲಕ್ಷ ರೂಪಾಯನ್ನು ಕೊಟ್ಟು, ಈ ವರ್ಷದಲ್ಲಿಯೇ, ಈ ಆರ್ಥಿಕವರ್ಷದಲ್ಲಿಯೇ ದಯಮಾಡಿ ಇದನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಬ್ಜೆಕ್ಟ್ ಟು ಅವೇಲಬಿಲಿಟಿ ಆಫ್ ಫಂಡ್ ಎನ್ನುವುದನ್ನು ತೆಗೆದುಹಾಕಿ ಈ ವರ್ಷದಲ್ಲಿ ಮುಗಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಬೇಕು.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಸಭಾಪತಿಗಳೇ ಅನೇಕ ಸಲ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಮಾಡಬೇಕಾದರೆ, ಟೌನ್ ಹಾಲ್‌ನಲ್ಲಿ ಬಾಡಿಗೆ ತೆಗೆದುಕೊಂಡು ಮಾಡಿರುವ ಸಂದರ್ಭಗಳು ಉಂಟು. ಸರ್ಕಾರದವರು ಈಗಾಗಲೇ ತಾಲ್ಲೂಕು ಹೆಡ್ ಕ್ವಾರ್ಟ್ರ್‌ಗಳಲ್ಲಿ ಮಿನಿ ವಿಧಾನ ಸೌಧವನ್ನು ಕಟ್ಟಿಸುತ್ತಿದ್ದಾರೆ. ಅದೇ ರೀತಿ ಕೋಲಾರ ಜಿಲ್ಲೆಯಲ್ಲಿ ಈಗಿರುವ ಡಿಸ್ಟ್ರಿಕ್ಟ್ ಆಫೀಸ್ ಪಕ್ಕದಲ್ಲಿ ಬೇಕಾದಷ್ಟು ಜಾಗ ಇದೆ. ತಾವು ಏಕೆ ಇನ್ನೊಂದು ಮಿನಿ ವಿಧಾನ ಸೌಧ ಕಟ್ಟುವುದಕ್ಕೆ ಪ್ರಯತ್ನ ಮಾಡಬಾರದು.

ಶ್ರೀ ಜಿ.ಎಚ್. ಅಶ್ವಥರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಬೈರೇಗೌಡರು ಬಹಳ ಪ್ರಾಮುಖ್ಯವಾದ ವಿಷಯವನ್ನು ಈ ಕಟ್ಟಡಗಳನ್ನೂ ದುರಸ್ತಿಮಾಡಿದ್ದರೆ ಪ್ರಾಣಾಪಾಯ ಬರುತ್ತದೆಂದು ಹೇಳಿದ್ದಾರೆ. ಅದಕ್ಕೆ ಬಹಳ ತೀವ್ರತೆಯಿಂದ ಅದನ್ನು ಪೂರ್ತಿ ಮಾಡುವುದಕ್ಕೆ ಆರ್ಥಿಕ ದೃಷ್ಟಿಯಿಂದ ಪರಿಶೀಲನೆ ಮಾಡುತ್ತೇವೆಂದು ಅಲ್ಲ, ಇನ್ನು ಒಂದೆರಡು ತಿಂಗಳು ಲೇಟ್ ಆಗಬಹುದು. ಆದರೂ ಈ ಕೆಲಸವನ್ನು ಪೂರ್ಣ ಮಾಡುತ್ತೇವೆಂದು ಹೇಳುತ್ತೇನೆ. ನಂತರ ಮಿನಿ ವಿಧಾನಸೌಧದ ವಿಷಯ ಬಂದಿಲ್ಲ ಪ್ರಸ್ತಾವ ಬಂದಮೇಲೆ ಆ ವಿಚಾರ ಮಾಡುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ತಾಲ್ಲೂಕು ಹೆಡ್ ಕ್ವಾರ್ಟ್ರ್‌ಗಳನ್ನು ಏಕೆ ಕಟ್ಟಿಸಬಾರದು?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಎಲ್ಲಾ ತಾಲ್ಲೂಕುಗಳಿಗೂ ಈ ಪ್ರಶ್ನೆ ಬಂದಿಲ್ಲ, ಬಂದಮೇಲೆ ಎಲ್ಲಾ ಕಡೆಗೂ ಹಂತಹಂತವಾಗಿ ಮಿನಿ ವಿಧಾನ ಸೌಧವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಬೈರೇಗೌಡರವರು ಬಹಳ ಪ್ರಮುಖವಾದಂಥ ಕೆಲಸವನ್ನು ನನ್ನ ಗಮನಕ್ಕೆ ತಂದಿದ್ದಾರೆ ಅದನ್ನು ಶೀಘ್ರದಲ್ಲೇ ಮಾಡಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಅಲ್ಲಿಯವರೆಗೆ ಕೆಲವು ಅಧಿಕಾರಿಗಳಿಗೆ ಹೆಲ್ಮೆಟ್ ಮತ್ತು ಛತ್ರಿಗಳನ್ನಾದರೂ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಜಿ.ಎಚ್. ಅಶ್ವಥರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ನಾನು ಅರ್ಥಮಾಡಿಕೊಂಡಿದ್ದೇನೆ. ನಮ್ಮ ಇಲಾಖೆಯವರೂ ಕೂಡ ಅಲ್ಲಿಗೆ ಹೋಗಿ ಬಂದಿದ್ದಾರೆ. ತಾವು ಕೇಳಿದ ಹಾಗೆ ಛತ್ರಿ ಹೆಲ್ಮೆಟ್ ಏನೂ ಬೇಕಾಗಿಲ್ಲ, ಸೂಪರಿಂಡೆಂಟ್ ಆಫೀಸ್ ಮತ್ತು ಜಿಲ್ಲಾಧಿಕಾರಿಗಳ ಆಫೀಸ್ ಏನು ಇದೆ ಅದನ್ನು ಶೀಘ್ರದಲ್ಲಿಯೇ ಕೆಲಸವನ್ನು ಪ್ರಾರಂಭಿಸಿ ರಿಪೇರಿ ಮಾಡಿಸಿಕೊಡುತ್ತೇನೆ. ಅಲ್ಲಿಯತನಕ ಯಾವ ತರಹದ ಆತಂಕ ಬೇಕಾಗಿಲ್ಲ.

ಶ್ರೀ ಸಿ. ಬೈರೇಗೌಡ : ತಮಗೆ ಧನ್ಯವಾದಗಳು.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಮಾತ್ರ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಸೇರಿದ ಕಟ್ಟಡಗಳು ಈ ಸ್ಥಿತಿಯಲ್ಲಿ ಇಲ್ಲ, ಅವರು?ಅವರ ಜಿಲ್ಲೆಯದು ಮಾತ್ರ ಹೇಳಿದರು. ಮಾನ್ಯಮಂತ್ರಿಗಳೆ ಬೇರೆ ಕಡೆ ಅದರಲ್ಲೂ ಮಲೆನಾಡಿನಲ್ಲಿ ಕೆಲವು ಲೋಪದೋಷಗಳಿಂದ ಕೂಡಿದ ಈ ಇಲಾಖೆಯ ಕಟ್ಟಡಗಳ

ಪರಿಸ್ಥಿತಿ ನೋಡಿದರೆ ಯಾವ ಸಂದರ್ಭದಲ್ಲಿ ಹೇಗೆ ಬೀಳುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಅದರ ರಿಪೇರಿಯನ್ನು ಯಾವಾಗ ಮಾಡಿಸುತ್ತೀರೆಂದು ಹೇಳಬೇಕು.

ಶ್ರೀ ಜಿ.ಎಚ್. ಅಶ್ವಥರೆಡ್ಡಿ : ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ನಾವು ರಿಪೇರಿಗಾಗಿ ಸುಮಾರು 38 ಕೋಟಿ ರೂಪಾಯಿಗಳನ್ನು ಕೇಳಿದರೆ, ನಮಗೆ ಒದಗಿಸಿದ್ದುದು ಬರೀ 10 ಕೋಟಿ ರೂಪಾಯಿ ಮಾತ್ರ ಅದನ್ನೆಲ್ಲಾ ಇದೇ ಆರ್ಥಿಕ ವರ್ಷದಲ್ಲಿ ರಿಪೇರಿ ಮಾಡಬೇಕೆಂದರೆ ಸ್ವಲ್ಪ ಕಷ್ಟವಾಗುತ್ತದೆ. ಆದುದರಿಂದ ಅವೇಲಬಲ್ ಫಂಡ್ಸ್ ಮೇಲೆ ಸ್ವಲ್ಪ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಶ್ರೀ ಕೆ.ವಿ. ರವೀಂದ್ರನಾಥ ಬಾಬು, ನಿಮ್ಮ ಪ್ರಶ್ನೆಗೆ ಎರಡು ವಾರ ಟೈಮ ಕೇಳಿದ್ದಾರೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೇ, ಕಳೆದ ಸಾರಿಯು ಸಹ ಇದೇ ರೀತಿಯಾಗಿ ಎರಡು ವಾರ ಮುಂದೆ ಹಾಕಿದ್ದಾರೆ. ಎರಡು ವಾರ ಮೂರು ವಾರ ಮುಂದೆ ಹಾಕಿದರೆ ಕಷ್ಟವಾಗುತ್ತದೆ.

ಅಧ್ಯಕ್ಷರು : ಮುಂದಿನ ವಾರ ನಿಮ್ಮ ಪ್ರಶ್ನೆಗೆ ಉತ್ತರ ಬರುತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅಧ್ಯಕ್ಷರೆ, ನನಗೆ ಉತ್ತರ ಬಂದಿರುವುದಿಲ್ಲ, ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು : ಹೌದು, ತಪ್ಪಾಗಿದೆ, ನೀವು ಯಾರಿಗೆ ಅಡ್ರೆಸ್ ಮಾಡಿದಿರಿ, ಈ ಪ್ರಶ್ನೆಯನ್ನು.....

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರಿಗೆ.

ಅಧ್ಯಕ್ಷರು : ಏನು ದೇವರು ನೀವು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ಎಂದು ಬರೆದಿದ್ದೀರಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅಧ್ಯಕ್ಷರೆ, ಒಂದು ಪಕ್ಷ ನಾನು ಗ್ರಾಮೀಣ ಅಭಿವೃದ್ಧಿ ಮಂತ್ರಿ ಎಂದು ಹಾಕಿದ್ದರೂ ಅವರಿಗೆ ಕನ್ನಡ ಓದಲಿಕ್ಕೆ ಬರುವುದಿಲ್ಲವೇ?

ಅಧ್ಯಕ್ಷರು : ನೀವು ಆ ಪ್ರದೇಶವನ್ನು ಪ್ರತಿನಿಧಿಸತಕ್ಕವರು. ನಿಮಗೆ ಗೊತ್ತಿಲ್ಲದೇ ಹೋದರೆ ಹೇಗೆ. ಅದು ಮಧ್ಯಂತರ ಮಂಡಲ ಅಂದರೆ ಹೆಚ್.ಯು.ಡಿ.ಗೆ ಬರುತ್ತದೆ. ರೆಗ್ಯುಲರ್ ಮಂಡಲ ಅಂದರೆ ಗ್ರಾಮೀಣ ಅಭಿವೃದ್ಧಿಗೆ ಬರುತ್ತದೆ ಎಂದು ಹೇಳಿ ತಮಗೆ ಗೊತ್ತಿಲ್ಲವೆ. ಆದ್ದರಿಂದ, ನಮ್ಮ ಸೆಕ್ರೆಟರಿಯೇಟ್‌ನಲ್ಲಿ ತಾವು ಯಾರಿಗೆ ಅಪೇಕ್ಷೆ ಪಡುತ್ತೀರೋ ಅವರಿಗೆ ಕಳುಹಿಸಿಕೊಡುತ್ತಾರೆ. ನಾವು ಬೇರೆ ಯಾರಿಗೂ ಕಳುಹಿಸಿಕೊಡುವುದಿಲ್ಲ ಈಗ ಅದನ್ನು ಬದಲಾವಣೆ ಮಾಡಿಕೊಳ್ಳಲಿಕ್ಕೆ ಹೇಳುತ್ತೇನೆ ಬಿಡಿ.

ರಾಜ್ಯದ ಪ್ರವಾಸೀ ಕೇಂದ್ರಗಳ ಅಭಿವೃದ್ಧಿ

2775 - ಶ್ರೀ ಪ್ರಭಾಕರ ಎಸ್.ರಾಣೆ (ಕಾರವಾರ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರವಾಸೀ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರವಾಸೋದ್ಯಮ ಇಲಾಖೆಗೆ ಕಾಯಕಲ್ಪ ಮಾಡಲು 160 ಕೋಟಿ ರೂಪಾಯಿ ಯೋಜನೆ ಸಿದ್ಧಪಡಿಸಿದ್ದು ನಿಜವಲ್ಲವೇ?